**CW : 4**
PW : 7

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

## CC No.497/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಜಂಬೂರಾಜ ಮಹಾಜನ |
| ತಂದೆಯ ಹೆಸರು | : | ಬಾಬು ಮಹಾಜನ |
| ಪ್ರಾಯ | : | 34 ವರ್ಷ |
| ಉದ್ಯೋಗ | | ಪೋ. ಉಪ ನಿರೀಕ್ಷಕರು, ಕಡಬ ಪೋ. |
| ವಾಸಸ್ಥಳ | : | ಕಡಬ |

ದಿನಾಂಕ: **25.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು 29-12-2023 ರಿಂದ 18-11-2025 ರವರೆಗೆ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೊ. ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ.18-1-2025 ರಂದು ಈ ಪ್ರಕರಣದ ಕಡತವನ್ನು ಚಾಸಾ1ರವರಿಂದ ಪಡೆದು ತನಿಹೆಯನ್ನು ಮುಂದುವರೆಸಿರುತ್ತೇನೆ. ದಿ 20.01.2025 ರಂದು ಈ ಪ್ರಕರಣದ ಆರೊಪಿಯ ವಿಚಾರೆಣೆಗೆ ಠಾಣೆಗೆ ಹಾಜರಾಗಿದ್ದು ಆತನ ವಿಚಾರಣೆ ನಡೆಸಿ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ದಿ 08.02.2025 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಎಸ್ ಬಿಸಿಎಲ್ ಅವರಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ 20.02.2025 ರಂದು ಈ ಪ್ರಕರಣಕ್ಕೆ ಸಂಬಂಧಿಸಿದ ಸ್ವತ್ತುಗಳ ಬಗ್ಗೆ ಆರ್ ಎಫ್ ಎಸ ಎಲ್ ವರದಿ ಬಂದಿದ್ದು ಅದನ್ನು ಸ್ವಿಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.20.03.2025ರಂದು ಚಾಸಾ4ರವರಿಗೆ ವಿಚಾರಣೆಗೆ ಹಾಜರಾಗಲು ಕಲಂ 179 ಬಿಎನ್ಎಸ್ಎಸ ಅಡಿಯಲ್ಲಿ ನೋಟಿಸ ಜಾರಿಗೊಳಿಸಿರುತ್ತೇನೆ. ದಿ.28.3.2025 ರಂದು ಚಾಸಾ4ರವರು ವಿಚಾರಣೆಗೆ ಹಾಜರಾಗಿದ್ದು ಅವರ ವಿಚಾರಣೆ ನಡೆಸಿ ಹೇಳಿಕೆಯನ್ನು ದಾಖಲಿಕೊಂಡಿರುತ್ತೇನೆ. ದಿ. 03.05.2025 ರಂದು ಆರೋಪಿತನ ವಿರುದ್ದ ದೋಷಾರೋಪಣಾ ಪತ್ರವನ್ನು ಮಾನ್ಯ ನಾಯಾಲಯಕ್ಕ ಸಲ್ಲಿಸಿರುತ್ತೇನೆ

ಸಾಕ್ಷಿಯು ನಿಪಿ10 ರಿಂದ 14 ದಾಖಲೆಗಳನು ನೋಡಿ ಗುರುತಿಸಿದ್ದು ಅವುಗಳ ಪೈಕಿ ನಿಪಿ10ರಲ್ಲಿನ ಸಾಕ್ಷಿಯ ಸಹಿಯನು ನಿಪಿ10ಬಿ ಎಂದು ಗುರುತಿಸಲಾಯಿತು. ಆರೋಪಿಯ ಹೇಳಿಕೆಯನ್ನು ನೋಡಿದರೆ ಗುರುತಿಸುತತೆನ. ಸಾಕ್ಷಿಯು ಆರೋಪಿಯ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ15 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ15ಎ ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರಿ ಜಿ ಡಿಎಸ ವಕೀಲರಿಂದಃ

ನಾನು ತಕ್ಷೀರು ಸ್ಥಳಕ್ಕೆ ಹೋಗಿ ತನಿಖೆ ಮಾಡಿದ್ದೇನೆ. ನಾನು ತಕ್ಷೀರು ಹೋಗಿ ತಕ್ಷೀರು ಸ್ಥಳದ ಬಗ್ಗೆ ಹಾಗೂ ಚಕಬಂದಿಯ ಬಗ್ಗೆ ವಿಚಾರಣೆ ಮಾಡಿದ್ದೇನೆ. ನಾನು ತಕ್ಷೀರು ಸ್ಥಳದ ನಕ್ಷೆಯನ್ನು ತಯಾರಿಸಿಲ್ಲ. ನಾನು ಈ ಪ್ರಕರಣ ಸಲುವಾಗಿ ಖುದ್ದು ತಕ್ಷೀರು ನಡೆದ ಸ್ಥಳಕ್ಕೆ ಹೋಗಿ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ತಕ್ಷೀರು ಸ್ಥಳದ ಸುತ್ತಮುತ್ತ ಏನೆಲ್ಲ ಇದೆ ಎಂದರೆ ಗೊತ್ತು. ಘಟನಾ ಸ್ಥಳದಿಂದ ಸುಮಾರು 5 ಅಡಿಯ ದೂರದಲ್ಲಿ ದಕ್ಷಿಣಕ್ಕೆ ರೆಂಜ ಮತ್ತು ಕೌಡಿಚ್ಚಾರ ಸಾರ್ವಜನಿಕ ಡಾಂಬರು ರಸ್ತೆ ಹಾದು ಹೋಗಿರುತ್ತದೆ, ಘಟನಾ ಸ್ಥಳದಿಂದ ಸುಮಾರು 15 ಅಡಿ ದೂರಕ್ಕೆ ರಾಧಾಕೃಷ್ಣ ರೈ ಎನ್ನುವವರಿಗೆ ಸೇರಿದ ದಿನಸಿ ಅಂಗಡಿ ಇರುತ್ತದೆ. ಘಟನಾ ಸ್ಥಳದಿಂದ ಸುಮಾರು 10 ಅಡಿ ಉತ್ತರಕ್ಕೆ ಸೀನಪ್ಪ ಪೂಜಾರಿ ಎನ್ನುವವರಿಗೆ ಸೇರಿದ ಅಂಗಡಿ ಕಾಂಪ್ಲೆಕ್ಸ ಇರುತ್ತದೆ. ಘಟನಾ ಸ್ಥಳದಲ್ಲಿ 4 ವಾಸದ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ಇರುತ್ತದೆ ಆದರೆ ಅವು ಸ್ಥಳದಿಂದ ತುಂಬಾ ದೂರ ಇರುತ್ತವೆ.

ಆರೊಪಿ ಘಟನಾ ಸ್ಥಳದಲ್ಲಿರುವ ಆರೋಪಿ ವ್ಯಾಪಾರ ಮಾಡಬಾರದು ಎಂದರೆ ಸುಳ್ಳು ಕೇಸು ದಾಖಲುಮಾಡಿರುತ್ತಾರೆ ಎಂದರ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ನಾವೆಲ್ಲ ಸೇರಿ ಸೃಷ್ಟಿಸಿದ್ದೇವೆ ಆದ ಕಾರಣವೇ ಪೊ. ಅಧಿಕಾರಿಯೆ ದೂರುದಾರರಾಗಿದ್ದು ಪೋ. ಸಿಬ್ಬಂದಿಯವರೆ ಸಾಕ್ಷಿದಾರರಾಗಿದ್ದಾರೆ ಎಂದರೆ ಸರಿಯಲ್ಲ.

ಬೆಟ್ಟಂಪಾಡಿಯ ಎಂಎಸಐಎಲ್ ಅಂಗಡಿಯಲ್ಲಿ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾದ ಸ್ವತುಗಳನ್ನ ಯಾರಿಗೆ ಮಾರಾಟ ಮಾಡಿದ್ದರು ಎನ್ನುವ ಬಗ್ಗೆ ಬಿಲ್ಲನ್ನು ಪರೀಶೀಲಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿಯ ಬಿಲ್ಲು ಇಲ್ಲ ಎಂದು ನುಡಿದಿರುತ್ತಾರೆ. ಒಬ್ಬ ವ್ಯಕ್ತಿ 2.4 ಲಿ. ನಷ್ಟು ಮಧ್ಯವನ್ನು ತನ್ನ ಸ್ವಾದಿನದಲ್ಲಿ ಪರವಾನಿಗೆ ಇಲ್ಲದೆ ಅಬಕಾರಿ ಕಾಯ್ದೆಯ ನಿಯಮದಂತೆ ಇಟುಕೊಳ್ಳಬಹುದು. ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**CW : 4**
PW : 7

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.